| | | | |
|---|---|---|---|
| ಕರ್ನಾಟಕ ಸರ್ಕಾರ | | | (ಸಿ.ಆರ್.ಪಿ-67) |
| ಹೇಳಿಕೆ ಹಾಳೆ (ಆರ್.ಸಿ. ಸಂಖ್ಯೆ 57) ನಮೂನೆ ಸಂಖ್ಯೆ 4 | ಪ್ರಧಾನ ದಿವಾಣಿ ಹಾಗೂ ಪ್ರ.ದ.ನ್ಯಾ.ದಂ.ಗಳ ನ್ಯಾಯಾಲಯ, ಚನ್ನಪಟ್ಟಣ | | |
| | ಸಿ.ಸಿ ನಂ. 4641/2022 | | |
| | | ಸಿ.ಡಬ್ಲೂ | 3 |
| | | ಪಿ.ಡಬ್ಲೂ | 3 |
| ಸಾಕ್ಷಿದಾರರ ಹೆಸರು | ಅವಿನಾಶ್ ಬಿನ್ ಕೃಷ್ಣ | | |
| ವಯಸ್ಸು | 28 ವರ್ಷ | | |
| ಉದ್ಯೋಗ | ಚಾಲಕ | | |
| ವಾಸಸ್ಥಳ | ಚನ್ನಪಟ್ಟಣ | | |

**<u>ದಿನಾಂಕ 22.09.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು</u>**

**<u>ಮುಖ್ಯ ವಿಚಾರಣೆ:- ಸಹಾಯಕ ಸರ್ಕಾರಿ ಅಭಿಯೋಜಕರಿಂದ:</u>**

**1)** ಚಾಸಾ-**1** ನಮ್ಮ ಗ್ರಾಮದವರು. ಚಾಸಾ-**1,** ಚಾಸಾ-**2** ಮತ್ತು **4** ರವರು ನನ್ನ ಸ್ನೇಹಿತರು. ಆರೋಪಿತನ ಪರಿಚಯ ಇಲ್ಲ. ಈ ಪ್ರಕರಣದ ಬಗ್ಗೆ ನನಗೆ ಯಾವುದೇ ಮಾಹಿತಿ ಇಲ್ಲ. ನಾನು ಪೊಲೀಸರಿಗೆ ಯಾವುದೇ ಹೇಳಿಕೆ ನೀಡಿಲ್ಲ. ಸಾಕ್ಷಿಯು ನಿಪಿ.**2** ಸ್ಥಳ ಪಂಚನಾಮೆ ಮತ್ತು ಅದರ ಮೇಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿಪಿ **2**(ಸಿ) ಎಂದು ಗುರುತಿಸಲಾಯಿತು. ನಿಪಿ.**2** ರಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿರುವುದಿಲ್ಲ. ನಿಪಿ.**2** ಕ್ಕೆ ಪೋಲಿಸರ ಕೋರಿಕೆಯ ಮೇರೆಗೆ ಠಾಣೆಯಲ್ಲಿ ಸಹಿ ಮಾಡಿರುತ್ತೇನೆ.

**ಈ ಹಂತದಲ್ಲಿ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಲು ಅನುಮತಿ ಕೋರಿದ್ದು, ಕೋರಿಕೆಯ ಮೇರೆಗೆ ಅನುಮತಿ ನೀಡಲಾಗಿದೆ.**

**<u>ವಾಟೀ ಸವಾಲು:- ಸಹಾಯಕ ಸರ್ಕಾರಿ ಅಭಿಯೋಜಕರಿಂದ:</u>**

1) ದಿ:**01.08.2022** ರಂದು ಚನ್ನಪಟ್ಟಣ ಟೌನ್ ಮೈಸೂರು ಬೆಂಗಳೂರು ರಸ್ತೆಯಲ್ಲಿ ತಾಲ್ಲೂಕು ಪಂಚಾಯಿತಿ ಕಚೇರಿಯ ಮುಂಭಾಗ ನನ್ನನ್ನು ಕರೆಸಿ ಚಾಸಾ-**1** ರವರು ತೋರಿಸಿದ ಜಾಗದಲ್ಲಿ ಪೋಲಿಸರು ನನ್ನ ಮತ್ತು ಚಾಸಾ-**2** ರವರ ಸಮಕ್ಷಮ ನಿಪಿ: **2** ರಂತೆ ಪಂಚನಾಮೆಯನ್ನು ಮಾಡಿದ್ದರು ಎಂದರೆ ಸರಿಯಲ್ಲ. ನಾನು ಪಂಚನಾಮೆಗೆ ಸ್ಥ ಳದಲ್ಲಿಯೇ ಸಹಿ ಮಾಡಿದ್ದರೂ ಸಹ ಆರೋಪಿತ ಪರಿಚಯ ಇರುವ ಕಾರಣ ಆತನ ಮಾತು ಕೇಳಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ:- ಇಲ್ಲ.**

**<u>ವಾಟೀ ಸವಾಲುಃ</u> ಆರೋಪಿ ಪರ ವಕೀಲರು ವಾಟೀ ಸವಾಲು ಇಲ್ಲವೆಂದು ನುಡಿದಿರುತ್ತಾರೆ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕೀಕರಣ ಮಾಡಲಾಯಿತು)

ಓ.ಹೆ.ಕೆ.ಸರಿ ಇದೆ.

ಪ್ರಧಾನ ದಿವಾಣಿ ಹಾಗೂ ಪ್ರ.ದ.ನ್ಯಾ.ದಂ.ಗಳು
ಚನ್ನಪಟ್ಟಣ.